KACM510003792025

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ನರಸಿಂಹರಾಜಪುರ.

ದಿನಾಂಕ 21 ನೇ ಏಪ್ರಿಲ್ 2026

- ಉಪಸ್ಥಿತರು -

ಶ್ರೀ ರಘುನಾಥಗೌಡ ಕೆ.ಟಿ., ಬಿ.ಕಾಂ., ಎಲ್.ಎಲ್.ಬಿ. ,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನರಸಿಂಹರಾಜಪುರ

**ಸಿ.ಸಿ. ಸಂಖ್ಯೆ .106/2025**

ಫಿರ್ಯಾದುದಾರರು: ರಾಜ್ಯದ ಪರವಾಗಿ ನರಸಿಂಹರಾಜಪುರ ಪೊಲೀಸ್

(ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿನಿಧಿಸುವರು)

ವಿರುದ್ಧ

ಆರೋಪಿತರು : 1. ಶ್ರೀ ಮಹೇಶ, ಬಿನ್ ಲೇಟ್ ಮರಿಯಯ್ಯ,
ವಯಸ್ಸು 38 ವರ್ಷ, ಕೂಲಿ ಕೆಲಸ,
ವಾಸಃ ಚಿಕ್ಕಗ್ರಹಾರ, ಆಡುವಳ್ಳಿ ಗ್ರಾಮ,
ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು.

2. ಶ್ರೀ ದಿನೇಶ್ ಸಿ.ಎ., ಬಿನ್ ಲೇಟ್ ಅಣ್ಣಪ್ಪ,
ವಯಸ್ಸು 23 ವರ್ಷ, ಕೂಲಿ ಕೆಲಸ,
ವಾಸಃ ಚಿಕ್ಕಗ್ರಹಾರ, ಆಡುವಳ್ಳಿ ಗ್ರಾಮ,
ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು.

(ಪ್ರತಿನಿಧಿಸುವವರು: ಶ್ರೀ ಕೆ.ಎಸ್.ಎಸ್. ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 06.08.2025 |
| ವರದಿ ಮಾಡಿದ ದಿನಾಂಕ | : | 16.08.2025 |
| ಆರೋಪಿಯನ್ನು ದಸ್ತಗಿರಿ ಮಾಡಿದ ದಿನಾಂಕ | : | 18.08.2025 |

| | | |
|---|---|---|
| ಆರೋಪಿಯನ್ನು ಬಿಡುಗಡೆ ಮಾಡಿದ ದಿನಾಂಕ | : | 01.09.2025 |
| ಪಿರ್ಯಾದುದಾರರ ಹೆಸರು | : | ಅನಿಲ್ ಕುಮಾರ್ ಸಿ.ಆರ್. |
| ಸಾಕ್ಷಿದಾರರ ವಿಚಾರಣೆ ಆರಂಭಿಸಿದ ದಿನಾಂಕ | : | 03.02.2026 |
| ಸಾಕ್ಷಿದಾರರ ವಿಚಾರಣೆ ಮುಗಿದ ದಿನಾಂಕ | : | 10.03.2026 |
| ಅಪರಾಧ ಕಲಂಗಳು | : | **ಭಾರತೀಯ ನಾಗರಿಕ ಸಂಹಿತೆ ಕಲಂ**.331(3), 331(4), ಹಾಗೂ 305 |
| ತೀರ್ಪಿನ ದಿನಾಂಕ | : | 21.04.2026 |
| ನ್ಯಾಯಾಧೀಶರ ತೀರ್ಪು | : | ಆರೋಪಿ-1 ಮತ್ತು 2 ರವರನ್ನು ಆರೋಪದಿಂದ ದೋಷ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ. |

RAGHUNATHA GOWDA K T
Digitally signed by RAGHUNATHA GOWDA K T
Date: 2026.04.21 17:20:12 +0530

**(ರಘುನಾಥಗೌಡ ಕೆ.ಟಿ.)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನರಸಿಂಹರಾಜಪುರ.

* * *

## :: ತೀರ್ಪು ::

ಈ ಮೊಕದ್ದಮೆಯಲ್ಲಿ ನರಸಿಂಹರಾಜಪುರ ಠಾಣಾ ಪೋಲಿಸರು ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ.305 ಹಾಗೂ 331(4) ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧದ ಬಗ್ಗೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ .

## 2. ಅಭಿಯೋಜನೆಯ ಪ್ರಕರಣದ ಸಾರಾಂಶಃ-

ದಿನಾಂಕಃ 05.08.2025 ರಂದು ಚಾಸಾ-1 ಮತ್ತು ಅವರ ಹೆಂಡತಿ ಆಡುವಳ್ಳಿ ಗ್ರಾಮದ ಚಿಕ್ಕಗ್ರಹಾರದ ತಮ್ಮ ತೋಟಕ್ಕೆ ಗೊಬ್ಬರ ಹಾಕಿ ದಿನಾಂಕಃ 06.08.2025 ರಂದು ಬೆಳಿಗ್ಗೆ ಅವರು ಶೃಂಗೇರಿಯ ಹರಡುಗೋಡು ಗ್ರಾಮಕ್ಕೆ ಕೆಲಸಕ್ಕೆ ಹೋಗಿದ್ದು, ನಂತರ ಅವರು ದಿನಾಂಕಃ 15.08.2025 ರಂದು ಚಿಕ್ಕಗ್ರಹಾರದಲ್ಲಿರುವ ಅವರ ಮನೆಗೆ ಬಂದು ನೋಡಿದಾಗ ಯಾರೋ ಕಳ್ಳರು ಮನೆಯ ಮುಂಭಾಗದ ಬೀಗವನ್ನು ಹೊಡೆದು ಮನೆಯ ಒಳಗೆ ಪ್ರವೇಶಿಸಿ ಮನೆಯಲ್ಲಿದ್ದ ಗಾಡ್ರೇಜ್ ಬೀರುವಿನಲ್ಲಿ ಇಟ್ಟಿದ್ದ 1) ರೂ.11,000/- ನಗದು, 2) ಸುಮಾರು 5 ಗ್ರಾಂ ತೂಕದ ಬಂಗಾರದ ಉಂಗುರ, 3) ಮನೆಯಲ್ಲಿದ್ದ ಸುಮಾರು 21 ಕೆ.ಜಿ. ತೂಕದ ತಾಮ್ರದ ಎರಡು ಹಂಡೆ ಮತ್ತು 2 ಕೊಡಪಾನಗಳು, 4) ಒಂದು ಗ್ಯಾಸ್ ಸಿಲಿಂಡರ್, 5) ಒಂದು 12 ವ್ಯಾಟ್ ಸೋಲಾರ್ ಚಾರ್ಜರ್ ಬ್ಯಾಟರಿ ಹಾಗೂ ಸೋಲಾರ್ ಪ್ಯಾನಲ್, 6) ಅರ್ಧ ಹೆಚ್.ಪಿ. ಕರೆಂಟ್ ಮೋಟಾರ್ ಈ ಮೇಲ್ಕಂಡ ವಸ್ತುಗಳನ್ನು ಕಳುವು ಮಾಡಿಕೊಂಡು ಹೋಗಿದ್ದು, ಸದರಿ ವಸ್ತುಗಳ ಅಂದಾಜು ಬೆಲೆ ರೂ.70,000/- ಹಾಗೂ ರೂ.11,000/- ನಗದು ಹಣ ಕಳ್ಳತನವಾಗಿದ್ದು, ದಿನಾಂಕಃ 06.08.2025 ರ ಬೆಳಿಗ್ಗೆ 6-00 ಗಂಟೆಯಿಂದ ದಿನಾಂಕಃ 15.08.2025 ರ ಸಂಜೆ 6-00 ಗಂಟೆಯ ಮಧ್ಯದ ಅವಧಿಯಲ್ಲಿ ಯಾರೋ ಕಳ್ಳರು ಅವರ ಮನೆಯ ಬೀಗವನ್ನು ಮುರಿದು ಮನೆಯಲ್ಲಿದ್ದ ಮೇಲ್ಕಂಡ ವಸ್ತುಗಳನ್ನು ಹಾಗೂ ಬೀರುವಿನಲ್ಲಿಟ್ಟಿದ್ದ ಉಂಗುರ ಮತ್ತು ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, ಆ ಸಂಬಂಧ ಚಾಸಾ-1 ರವರು ದೂರನ್ನು ನೀಡಿದ್ದು. ಅದನ್ನು ನ.ರಾ.ಪುರ ಠಾಣಾ ಪೋಲಿಸರು ತಮ್ಮ ಠಾಣಾ ಗುನ್ನಾ ಸಂಖ್ಯೆಃ70/2025 ರಲ್ಲಿ ದಾಖಲಿಸಿಕೊಂಡು, ನಂತರ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ.305 ಹಾಗೂ 331(4) ರ ಕಾಯ್ದೆಯಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧ ಮಾಡಿರುತ್ತಾರೆಂದು ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

3. ಮೊಕದ್ದಮೆಯನ್ನು ದಾಖಲಿಸಿಕೊಂಡು ಆರೋಪಿತರಿಗೆ ಸಮನ್ಸ್ ಜಾರಿ ಮಾಡಲಾಗಿ, ಆರೋಪಿತರು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ತದನಂತರ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ. 230 ರಡಿಯಲ್ಲಿ ಆರೋಪಿತರಿಗೆ ದೋಷರೋಪಣಾ ಪತ್ರದ ನಕಲನ್ನು ಜಾರಿ ಮಾಡಿ, ದೋಷಾರೋಪಣೆಯನ್ನು ತಯಾರಿಸಿ, ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ತಾವು ತಪ್ಪು ಮಾಡಿಲ್ಲ ಎಂದು ಹೇಳಿ ವಿಚಾರಣೆ ಆಗುವಂತೆ ಕೇಳಿಕೊಂಡಿದ್ದರಿಂದ ಮೊಕದ್ದಮೆಯನ್ನು ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆಗೆ ಇಡಲಾಯಿತು.

4. ಅಭಿಯೋಜನೆಯ ಪರ ಪ್ರಾಸಾ-1 ರಿಂದ ಪ್ರಾಸಾ-11 ರವರನ್ನು ವಿಚಾರಣೆ ಮಾಡಿ, ದಸ್ತಾವೇಜು ನಿಪಿ-1 ರಿಂದ ನಿಪಿ-34 ನ್ನು ಹಾಗೂ ಮುದ್ದೆ ಮಾಲು **1** ರಿಂದ **8** ನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆ ಪರ ಕೊಟ್ಟ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ದ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 351 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಮಾಡಿಕೊಳ್ಳಲಾಯಿತು. ಆರೋಪಿತರು ತಮ್ಮ ಪರ ಯಾವುದೆ ಸಾಕ್ಷ್ಯ ವಿಚಾರಣೆ ಮಾಡಿಕೊಂಡಿರುವುದಿಲ್ಲ.

5. ಉಭಯತ್ರರರ ವಾದವನ್ನು ಕೇಳಲಾಯಿತು.

6. ಈ ಮೊಕದ್ದಮೆಯನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ಉದ್ಭವಿಸುತ್ತದೆ.

- ಅಂಶಗಳು -

ಅಂಶ **1-** ದಿನಾಂಕ **13.08.2025** ರಂದು ರಾತ್ರಿ **7-30** ರಿಂದ **8-00** ಗಂಟೆ ಸಮಯದಲ್ಲಿ ನ.ರಾ.ಪುರ ಪೊಲೀಸ್ ಠಾಣಾ ಸರಹದ್ದಿನ ಆಡುವಳ್ಳಿ ಗ್ರಾಮದ ಸರ್ವೆ ನಂ.**121/1** ರಲ್ಲಿರುವ ಚಿಕ್ಕಗ್ರಹಾರ ವಾಸಿ ಚಾಸಾ-**1** ರವರ ವಾಸದ ಮನೆಗೆ ಆರೋಪಿತರು ಅಪರಾದ ಮಾಡುವ ಉದ್ದೇಶದ ಹಿನ್ನೆಲೆಯಲ್ಲಿ ಸದರಿಯವರ

ಮನೆಗೆ ಅತಿಕ್ರಮ ಪ್ರವೇಶ ಮಾಡಿ ಮನೆಯ ಬಾಗಿಲ ಬೀಗವನ್ನು ಒಡೆದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.**331(4)**ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯತೀತವಾಗಿ ರುಜುವಾತುಪಡಿಸುವರೇ**?**

ಅಂಶ **2-** ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಚಾಸಾ-**1** ಮತ್ತು **2** ರವರಿಗೆ ಸಮಾನ ಮನಸ್ಕ ಉದ್ದೇಶದಿಂದ ಆರೋಪಿತರು ಅವಾಚ್ಯ ಶಬ್ದಗಳಿಂದ ಅವಮಾನವಾಗುವಂತೆ ನಿಂದಿಸಿ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.**305** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯತೀತವಾಗಿ ರುಜುವಾತುಪಡಿಸುವರೇ**?**

ಅಂಶ **3-** ಯಾವ ಆದೇಶ**?**

7. ಮೇಲ್ಕಂಡ ಅಂಶಗಳಿಗೆ ಮುಂದೆ ಹೇಳಲಾದ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸಿದೆ.

ಅಂಶ 1 ಮತ್ತು 2 ...... ನಕಾರಾತ್ಮಕವಾಗಿ,

ಅಂಶ 3 ...... ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

8. ಅಂಶ **1** ಮತ್ತು **2:-** ಈ ಮೇಲ್ಕಂಡ ಅಂಶಗಳು ಒಂದಕ್ಕೊಂದು ಪೂರಕವಾಗಿದ್ದು, ಪುನಾರವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಎಲ್ಲಾ ಅಂಶಗಳನ್ನು ಒಟ್ಟಾಗಿ ಚರ್ಚಿಸಲು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

9. ಪ್ರಮುಖವಾಗಿ ಅಭಿಯೋಜನೆಯು ಆರೋಪಿತರ ವಿರುದ್ಧ ರುಜುವಾತುಪಡಿಸಬೇಕಾದ ಅಂಶಗಳೆಂದರೆ ದಿನಾಂಕಃ 05.08.2025 ರಿಂದ

15.08.2025 ರ ಅವಧಿಯಲ್ಲಿ ಆರೋಪಿತರು ಚಾಸಾ-1 ರವರ ಮನೆಯ ಬೀಗವನ್ನು ಒಡೆದು ಮನೆಯ ಗೋಡ್ರೇಜ್ ಬೀರುವಿನಲ್ಲಿ ಇದ್ದ ನಗದು ರೂ. 11,000/-, 5 ಗ್ರಾಂ ಬಂಗಾರದ ಉಂಗುರ, 2 ಹಂಡೆ, 2 ಕೊಡಪಾನ ಹಾಗೂ ಅರ್ಧ ಹೆಚ್.ಿ. ಕರೆಂಟ್ ಮೋಟರ್ ಅನ್ನು, ಗ್ಯಾಸ್ ಸಿಲಿಂಡರ್, 2 ಒಲೆ ಸ್ಟೋ, 1 ಸೋಲಾರ್ ಚಾರ್ಜರ್ ಬ್ಯಾಟರಿ, ಇಸ್ತ್ರಿ ಪೆಟ್ಟಿಗೆ ಹಾಗೂ ಸೋಲಾರ್ ಪ್ಯಾನಲ್ ಅನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂಬ ಅಂಶಗಳನ್ನು ರುಜುವಾತುಪಡಿಸುವ ಗುರುತರವಾದ ಜವಾಬ್ದಾರಿ ಅಭಿಯೋಜನೆಯ ಮೇಲೆ ಇರುತ್ತದೆ.

10. ಈ ಮೇಲ್ಕಂಡ ಅಂಶಗಳನ್ನು ಸಾಬೀತುಪಡಿಸುವ ಸಂಬಂಧ ಅಭಿಯೋಜನೆಯವರು ಈ ಪ್ರಕರಣದ ದೂರುದಾರರಾದ ಚಾಸಾ-1 ಅನಿಲ್ ಕುಮಾರ್ ಸಿ.ಆರ್. ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರಿನಲ್ಲಿ ಹೇಳಿದ ಅಂಶಗಳನ್ನು ಪುನರಾವರ್ತನೆ ಗೊಳಿಸಿರುತ್ತಾರೆ ಹಾಗೂ ಅದೇ ದಿನ ಪೋಲಿಸರು ಸ್ಥಳಕ್ಕೆ ಬಂದಿದ್ದು, ತಮ್ಮ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆ ಮಾಡಿ ಕೃತ್ಯಕ್ಕೆ ಬಳಸಿದ ಸುತ್ತಿಗೆ ರಾಡ್ ಅನ್ನು ವಶಪಡಿಸಿಕೊಂಡಿರುತ್ತಾರೆ. ದಿನಾಂಕಃ 18.08.2025 ರಂದು ಪೋಲಿಸರು ಆರೋಪಿತರನ್ನು ತಮ್ಮ ಮನೆಯ ಬಳಿ ಕರೆದುಕೊಂಡು ಬಂದು ಮಹಜರ್ ಮಾಡಿದ್ದು ತಾವು ನ್ಯಾಯಾಲಯದ ಆದೇಶದ ಮೇರೆಗೆ 1 ಇಂಡಿಯನ್ ಗ್ಯಾಸ್ ಸಿಲಿಂಡರ್, 2 ಒಲೆಯ ಸ್ಟೋ, 1 ಸೋಲಾರ್ ಚಾರ್ಜರ್ ಬ್ಯಾಟರಿ, ಇಸ್ತ್ರಿ ಪೆಟ್ಟಿಗೆ, ಸೋಲಾರ್ ಪ್ಯಾನಲ್ ಹಾಗೂ 1 ಕಬ್ಬಿಣದ ಸುತ್ತಿಗೆಯನ್ನು ಬಿಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿತರ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ದೂರಿನಲ್ಲಿ 21 ಕೆ.ಜಿ. ತೂಕದ ತಾಮ್ರದ 2 ಹಂಡೆ ಮತ್ತು ಕೊಡಪಾನ ಹಾಗೂ ಅರ್ಧ ಹೆಚ್.ಪಿ. ಕರೆಂಟ್ ಮೋಟರ್ ಕಳೆದು ಹೋಗಿದ್ದಾಗಿ ದೂರು ಕೊಟ್ಟಿದ್ದು ಆದರೆ ತಮ್ಮ ಮರು ಹೇಳಿಕೆಯಲ್ಲಿ ಸದರಿ ವಸ್ತುಗಳು ತಮ್ಮ ಮನೆಯಲ್ಲಿಯೇ ಇರುವುದಾಗಿ ಹೇಳಿಕೆ ಕೊಟ್ಟಿರುವುದು ಕಂಡು ಬಂದಿರುತ್ತದೆ.

11. ಪ್ರಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಮಹಜರ್ ಮಾಡುವ ಕಾಲಕ್ಕೆ ಪೋಲಿಸರು ತಮಗೆ ಯಾವುದೇ ನೋಟಿಸು ಕೊಟ್ಟಿರುವುದಿಲ್ಲ ಹಾಗೂ ಯಾವ ಕಾರಣಕ್ಕಾಗಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ ತಮಗೆ ಗೊತ್ತಿಲ್ಲ ಎಂದು ಸಾಕ್ಷ ನುಡಿದಿರುವುದು ಕಂಡು ಬಂದಿರುತ್ತದೆ.

12. ಅಭಿಯೋಜನೆಯು ಆಪಾದಿತರ ವಿರುದ್ಧ ಆಪಾದನೆ ಸಾಬೀತುಪಡಿಸುವ ಸಂಬಂಧ ಕೃತ್ಯ ಸ್ಥಳದ ಪಂಚನಾಮೆ ಸಾಕ್ಷಿದಾರರಾದ ಶಿವಕುಮಾರ ಮತ್ತು ಸಿ.ಪಿ. ರತ್ನಾಕರ ಇವರನ್ನು ಪ್ರಾಸಾ-2 ಮತ್ತು ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನಿಪಿ-2 ರಲ್ಲಿ ಬರೆದ ವಿಚಾರಗಳ ಬಗ್ಗ ತಮಗೆ ಗೊತ್ತಿರುವುದಿಲ್ಲ ಹಾಗೂ ನಿಪಿ-3 ರಿಂದ ನಿಪಿ-11 ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಗೊತ್ತಿರುವುದಿಲ್ಲ ಮತ್ತು ತಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಗಳನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರು ಸಹ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶಗಳನ್ನು ರುಜುವಾತು ಪಡಿಸಿರುವುದಿಲ್ಲ.

13. ಅಭಿಯೋಜನೆಯು ಆರೋಪಿತರ ಮೇಲಿನ ಆಪಾದನೆಯನ್ನು ಸಾಬೀತುಪಡಿಸುವ ಸಂಬಂಧ ಪ್ರಾಸಾ-4 ರಫೀಕ್ ಮತ್ತು ಪ್ರಾಸಾ-5 ರಾಘವೇಂದ್ರ, ಇವರು ಅಮಾನತು ಪಂಚನಾಮೆಯ ಸಾಕ್ಷಿದಾರರನ್ನು ವಿಚಾರಣಗೆ ಒಳಪಡಿಸಿದ್ದು, ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮ್ಮ ಸಮಕ್ಷಮ ಯಾವುದೆ ಅಮಾನತು ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೆ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಮತ್ತು ನಿಪಿ-13 ರಲ್ಲಿ ಬರೆದ ವಿಚಾರಗಳ ಬಗ್ಗ ತಮಗೆ ಗೊತ್ತಿರುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಗಳನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹಾ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ

ಅಂಶಗಳನ್ನು ರುಜುವಾತು ಪಡಿಸಿರುವುದಿಲ್ಲ ಹಾಗೂ ನಿಪಿ-13 ರಲ್ಲಿನ ಅಂಶಗಳನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

14. ಅಭಿಯೋಜನೆಯು ಆರೋಪಿತರ ಮೇಲಿನ ಆಪಾದನೆಯನ್ನು ಸಾಬೀತುಪಡಿಸುವ ಸಂಬಂಧ ಪ್ರಾಸಾ-6 ಜ್ಯೋತಿ, ಇವರು ಚಾಸಾ-1 ರವರ ಹೆಂಡತಿ ಇದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ತಮ್ಮನ್ನು ವಿಚಾರಣೆ ಮಾಡಿ ಯಾವುದೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಘಟನೆಯ ಬಗ್ಗೆ ತಮಗೆ ಯಾವುದೆ ಮಾಹಿತಿ ಇರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಗಳನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹಾ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶಗಳನ್ನು ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ.

15. ಅಭಿಯೋಜನೆಯು ಆರೋಪಿತರ ಮೇಲಿನ ಆಪಾದನೆಯನ್ನು ಸಾಬೀತುಪಡಿಸುವ ಸಂಬಂಧ ಪ್ರಾಸಾ-7 ಸ್ವೀಕಾರ್, ಪ್ರಾಸಾ-8 ಸದಾಶಿವ ಹಾಗೂ ಪ್ರಾಸಾ-9 ಮಹೇಶ್ ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ತಮ್ಮನ್ನು ವಿಚಾರಣೆ ಮಾಡಿ ಯಾವುದೆ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಘಟನೆಯ ಬಗ್ಗೆ ತಮಗೆ ಯಾವುದೆ ಮಾಹಿತಿ ಇರುವುದಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಗಳನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹಾ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶಗಳನ್ನು ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ.

16. ಅಭಿಯೋಜನೆಯು ಆರೋಪಿತರ ಮೇಲಿನ ಆಪಾದನೆಯನ್ನು ಸಾಬೀತುಪಡಿಸುವ ಸಂಬಂಧ ಪ್ರಾಸಾ-10 ಭಾನುಪ್ರಕಾಶ್, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ತಮ್ಮನ್ನು ವಿಚಾರಣೆ ಮಾಡಿ ಯಾವುದೆ ಹೇಳಿಕೆಯನ್ನು ಪಡೆದು ಕೊಂಡಿರುವುದಿಲ್ಲ ಹಾಗೂ ಘಟನೆಯ ಬಗ್ಗೆ ತಮಗೆ ಯಾವುದೆ ಮಾಹಿತಿ

ಇರುವುದಿಲ್ಲ ಹಾಗೂ ತಮ್ಮ ಸಮಕ್ಷಮ ಯಾವುದೆ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹಾ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶಗಳನ್ನು ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ.

17. ಅಭಿಯೋಜನೆಯು ಆರೋಪಿತರ ಮೇಲಿನ ಆಪಾದನೆಯನ್ನು ಸಾಬೀತು ಪಡಿಸುವ ಸಂಬಂಧ ಈ ಪ್ರಕರಣದ ತನಿಖಾಧಿಕಾರಿಯಾದ ಜ್ಯೋತಿ ಎನ್.ಎ. ಇವರನ್ನು ಪ್ರಾಸಾ-11 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷದಲ್ಲಿ ತಾವು ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿ, ಪಂಚರ ಸಮಕ್ಷಮ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ, ಪಂಚನಾಮೆ ಹಾಗೂ ಅಮಾನತು ಮಹಜರನ್ನು ಮಾಡಿರುವ ಬಗ್ಗೆ ಹಾಗೂ ಚಾಸಾ-6 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಂಡು ಆರೋಪಿತರ ವಿರುದ್ಧ ದೋಷರೋಪಣ ಪಟ್ಟಿಯನ್ನು ಸಲ್ಲಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿತರ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ-1 ರವರು ದೂರಿನಲ್ಲಿ ತಮ್ಮ ಮನೆಯಲ್ಲಿ ಕಳ್ಳತನವಾದ ವಸ್ತುಗಳ ಬಗ್ಗೆ ಹಾಗೂ ತಮ್ಮ ಮರುಹೇಳಿಕೆಯಲ್ಲಿ ತಮ್ಮ ಮನೆಯಲ್ಲಿ ಕಳ್ಳತನವಾದ ವಸ್ತುಗಳ ಬಗ್ಗೆ ತದ್ವಿರುದ್ಧವಾಗಿ ಹೇಳಿರುತ್ತಾರೆ ಎಂದರೆ ಸರಿ.

18. ಪ್ರಕರಣದಲ್ಲಿನ ಎಲ್ಲಾ ದಾಖಲೆಗಳನ್ನು ಹಾಗೂ ಸಾಕ್ಷ್ಯ ವಿಚಾರಗಳನ್ನು ಪರಿಶೀಲಿಸಿದಾಗ ನಿಪಿ-1 ದೂರಿನಲ್ಲಿ ಫಿರ್ಯಾದುದಾರರು ತಮ್ಮ ಮನೆಯಲ್ಲಿ ಕಳ್ಳತನವಾದ ಬಗ್ಗೆ ದೂರು ಕೊಟ್ಟಿದ್ದು, ತದನಂತರ ತಮ್ಮ ಮರುಹೇಳಿಕೆಯಲ್ಲಿ ತಾವು ದೂರಿನಲ್ಲಿ ಹೇಳಿದಂತಹ ಅಷ್ಟು ವಸ್ತುಗಳು ಕಳ್ಳತನವಾಗಿರುವುದಿಲ್ಲ, ಆದರೆ ತಾವು ದೂರು ಕೊಡುವ ಕಾಲಕ್ಕೆ ರೂ.11,000/- ಹಣ, 5 ಗ್ರಾಂ ಬಂಗಾರ, 2 ಅಂಡೆ, 2 ಕೊಡಪಾನ ಹಾಗೂ ಹೆಚ್.ಪಿ. ಮೋಟಾರ್ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದ್ದು, ಆದರೆ ಸದರಿ ವಸ್ತುಗಳನ್ನು ಬೇರೆ ಕಡೆ ಇಟ್ಟಿರುವುದಾಗಿ ಮರುಹೇಳಿಕೆ ಕೊಟ್ಟಿರುವುದು

ಕಂಡು ಬರುತ್ತದೆ. ಈ ಪ್ರಕರಣದಲ್ಲಿ ಫಿರ್ಯಾದುದಾರರು ಮತ್ತು ತನಿಖಾಧಿಕಾರಿಯನ್ನು ಹೊರತುಪಡಿಸಿ, ಯಾವುದೇ ಪ್ರತ್ಯಕ್ಷ ಸಾಕ್ಷಿಗಳು ಇರುವುದಿಲ್ಲ ಹಾಗೂ ಪ್ರಾಸಾ-2 ಮತ್ತು 3 ರವರು ಕೃತ್ಯ ಸ್ಥಳದ ಪಂಚನಾಮೆಯ ಸಾಕ್ಷಿದಾರರಿದ್ದು, ಸದರಿಯವರು ತಮ್ಮ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲವೆಂದು ಹಾಗೂ ಅಮಾನತು ಪಂಚನಾಮೆ ಮಾಡುವ ಕಾಲಕ್ಕೆ ಹಾಜರಿದ್ದ ಪ್ರಾಸಾ-4 ಮತ್ತು 5 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು ಹಾಗೂ ಈ ಘಟನೆಯ ಕುರಿತು ಹೇಳಿಕೆ ನೀಡಿದಂತಹ ಪ್ರಾಸಾ-6 ರಿಂದ 10 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾವು ಪೊಲೀಸರು ಮುಂದೆ ಯಾವುದೆ ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿದ್ದು ಹಾಗೂ ಪ್ರಾಸಾ-1 ರವರು ಮಹಜರ್ ನಲ್ಲಿ ಬರೆದ ವಿಚಾರಗಳ ಬಗ್ಗೆ ತಮಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

19. ಅಭಿಯೋಜನೆಯು ಪ್ರಮುಖವಾಗಿ ಆರೋಪಿತರು ಫಿರ್ಯಾದುದಾರರ ಮನೆಯಲ್ಲಿ ಕಳ್ಳತನ ಮಾಡಿರುತ್ತಾರೆ ಎಂಬ ಅಂಶವನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿದ್ದು ಹಾಗೂ ಪ್ರಕರಣದ ತನಿಖಾಧಿಕಾರಿ ತನಿಖೆಯ ಆಧಾರದ ಮೇಲೆ ಆರೋಪಿತರನ್ನು ಈ ಮೇಲೆ ಹೇಳಿದ ಆಪಾದನೆಗೆ ದಂಡನೆಗೆ ಒಳಪಡಿಸಲು ಬರುವುದಿಲ್ಲ. ಮೇಲ್ಕಂಡ ಎಲ್ಲಾ ಸಾಕ್ಷ್ಯಗಳನ್ನು ಹಾಗೂ ಉಭಯಪಕ್ಷಗಾರರು ಹಾಜರುಪಡಿಸಿದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಆರೋಪಿತರು ಆ ದಿನ ಪ್ರಾಸಾ-1 ರವರ ಮನೆಯಲ್ಲಿ ಕಳ್ಳತನ ಮಾಡಿರುತ್ತಾರೆ ಎಂಬ ಅಂಶಗಳನ್ನು ರುಜುವಾತುಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಆದುದರಿಂದ ಈ ಮೇಲ್ಕಂಡ ಕಾರಣಗಳಿಂದ ನಾನು ಅಂಶ 1 ಮತ್ತು 2 ನ್ನು ನಕರಾತ್ಮಕ ಎಂದು ಉತ್ತರಿಸಿರುತ್ತೇನೆ.

20. <u>ಅಂಶ **-3**ಃ</u> ಅಂಶ – 1 ಮತ್ತು 2 ಕ್ಕೆ ಮೇಲೆ ಕೊಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ ಅಂತಿಮ ಆದೇಶ ಮಾಡಿದೆ.

## ಆ ದೇ ಶ

ಭಾರತೀಯ ನ್ಯಾಯ ಸುರಕ್ಷ ಸಂಹಿತೆ ಕಲಂ 271(1)ರಡಿಯಲ್ಲಿ ದತ್ತವಾದ ಅಧಿಕಾರದ ಮೇರೆಗೆ ಭಾರತೀಯ ನ್ಯಾಯ ಸಂಹಿತೆ ಕಲಂ.331(3), 331(4) ಹಾಗೂ 305 ರ ಕಾಯ್ದೆಯಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ಸಾಬೀತುಪಡಿಸವಲ್ಲಿ ವಿಫಲರಾಗಿರುವುದರಿಂದ ಆರೋಪಿತರನ್ನು ನಿರಪರಾಧಿಯೆಂದು ತೀರ್ಮಾನಿಸಿ ಈ ಮೂಲಕ ಬಿಡುಗಡೆ ಮಾಡಲಾಯಿತು.

ಆರೋಪಿತರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ಮುಂದಿನ **6** ತಿಂಗಳವರೆಗೆ ವಿಸ್ತರಿಸಲಾಗಿರುತ್ತದೆ.

ಮುದ್ದೆ ಮಾಲು **1** ರಿಂದ **6** ಫಿರ್ಯಾದುದಾರರಿಗೆ ತಾತ್ಕಾಲಿಕವಾಗಿ ಬಿಡುಗಡೆ ಮಾಡಿದ್ದು, ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ಖಾಯಂಗೊಳಿಸಲಾಗಿರುತ್ತದೆ.

ಮುದ್ದೆ ಮಾಲು **7** ಮತ್ತು **8** ಸ್ಟೀಲ್ ಬೀಗ ಮತ್ತು ಬೀರುವಿನ ತುಂಡಾಗಿರುವ ರಾಡು ಇದ್ದು, ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ಹರಾಜು ಮೂಲಕ ಮಾರಾಟ ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡುವಂತೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅವರು ತಯಾರಿಸಿದ ಪ್ರತಿಯನ್ನು ಓದಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 21-04-2026 ರಂದು ಘೋಷಿಸಲಾಯಿತು)

RAGHUNATHA GOWDA K T
Digitally signed by RAGHUNATHA GOWDA K T
Date: 2026.04.21 17:20:40 +0530

**(ರಘುನಾಥಗೌಡ ಕೆ.ಟಿ.)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನರಸಿಂಹರಾಜಪುರ.

## - ಅನುಬಂಧ -

ಅ) ಅಭಿಯೋಜನೆಯ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:

| | | |
|---|---|---|
| ಪ್ರಾಸಾ.1 | - | ಶ್ರೀ ಅನಿಲ್ ಕುಮಾರ್. |
| ಪ್ರಾಸಾ.2 | - | ಶ್ರೀ ಶಿವಕುಮಾರ್ ಸಿ.ಟಿ. |
| ಪ್ರಾಸಾ.3 | - | ಶ್ರೀ ರತ್ನಾಕರ್. |
| ಪ್ರಾಸಾ.4 | - | ಶ್ರೀ ರಫೀಕ್. |
| ಪ್ರಾಸಾ.5 | - | ಶ್ರೀ ರಾಘವೇಂದ್ರ ಸಿ.ಎ., |
| ಪ್ರಾಸಾ.6 | - | ಶ್ರೀಮತಿ ಜ್ಯೋತಿ. |
| ಪ್ರಾಸಾ.7 | - | ಶ್ರೀ ಸ್ವೀಕಾರ್. |
| ಪ್ರಾಸಾ.8 | - | ಶ್ರೀ ಸದಾಶಿವ ಸಿ.ಆರ್. |
| ಪ್ರಾಸಾ.9 | - | ಶ್ರೀ ಮಹೇಶ. |
| ಪ್ರಾಸಾ.10 | - | ಶ್ರೀ ಭಾನು ಪ್ರಕಾಶ್. |
| ಪ್ರಾಸಾ.11 | - | ಶ್ರೀಮತಿ ಜ್ಯೋತಿ. |

ಆ) ಅಭಿಯೋಜನೆಯ ಪರ ಗುರುತಿಸಿಕೊಂಡಿರುವ ದಾಖಲಾತಿಗಳು:

| | | |
|---|---|---|
| ನಿಪಿ.1 | - | ದೂರು. |
| ನಿಪಿ.1(ಎ) | - | ಪ್ರಾಸಾ-1 ರವರ ಸಹಿ. |
| ನಿಪಿ.2 | - | ಮಹಜರ್. |
| ನಿಪಿ.2(ಎ) | - | ಪ್ರಾಸಾ-1 ರವರ ಸಹಿ. |
| ನಿಪಿ.3-12 | - | ಭಾವಚಿತ್ರಗಳು. |
| ನಿಪಿ.13 | - | ಮಹಜರ್. |
| ನಿಪಿ.13(ಎ) | - | ಪ್ರಾಸಾ-3 ರವರ ಸಹಿ. |
| ನಿಪಿ.21 | - | ಪ್ರಾಸಾ-6 ರವರ ಹೇಳಿಕೆ. |
| ನಿಪಿ.22 | - | ಪ್ರಾಸಾ-7 ರವರ ಹೇಳಿಕೆ. |
| ನಿಪಿ.23 | - | ಪ್ರಾಸಾ-8 ರವರ ಹೇಳಿಕೆ. |

| | | |
|---|---|---|
| ನಿಪಿ.24 | - | ಪ್ರಾಸಾ-9 ರವರ ಹೇಳಿಕೆ. |
| ನಿಪಿ.25 | - | ಪ್ರಾಸಾ-10 ರವರ ಹೇಳಿಕೆ. |
| ನಿಪಿ.26 | - | ಪ್ರಥಮ ವರ್ತಮಾನ ವರದಿ. |
| ನಿಪಿ.27 | - | ಮನವಿ. |
| ನಿಪಿ.28 | - | ಮಾಹಿತಿ. |
| ನಿಪಿ.29 | - | 634(ಸಿ) ಪ್ರಮಾಣ ಪತ್ರ. |
| ನಿಪಿ.30-34 | - | ಭಾವಚಿತ್ರಗಳು. |

ಇ) ಆರೋಪಿತರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳುಃ - ಇಲ್ಲ -

ಈ) ಆರೋಪಿತರ ಪರ ಗುರುತಿಸಿಕೊಂಡಿರುವ ಸಾಕ್ಷಿಗಳುಃ

ಭಾವಚಿತ್ರಗಳು.

ಎ) ಅಭಿಯೋಜನೆಯ ಪರ ಗುರುತಿಸಿಕೊಂಡಿರುವ ಮುದ್ದೆಮಾಲುಗಳುಃ

| | | |
|---|---|---|
| ಮು-ಮಾ.1 | - | ಮರದ ಹಿಡಿ ಇರುವ ಕಬ್ಬಿಣದ ಸುತ್ತಿಗೆ. |
| ಮು-ಮಾ.2 | - | ಗ್ಯಾಸ್ ಸಿಲಿಂಡರ್. |
| ಮು-ಮಾ.3 | - | ಸೋಲಾರ್ ಪ್ಯಾನಲ್. |
| ಮು-ಮಾ.4 | - | ಬ್ಯಾಟರಿ. |
| ಮು-ಮಾ.5 | - | ಗ್ಯಾಸ್ ಸ್ಟೋವ್. |
| ಮು-ಮಾ.6 | - | ಕರೆಂಟ್ ಇಸ್ತ್ರಿ ಪೆಟ್ಟಿಗೆ. |
| ಮು-ಮಾ.7 | - | ಸ್ಟೀಲ್ ಬೀಗ. |
| ಮು-ಮಾ.8 | - | ಬೀರುವಿನ ಲಾಕ್ ನ ತುಂಡಾಗಿರುವ ರಾಡು. |

RAGHUNATHA GOWDA K T
Digitally signed by RAGHUNATHA GOWDA K T
Date: 2026.04.21 17:20:53 +0530

(ರಘುನಾಥಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನರಸಿಂಹರಾಜಪುರ.